

ಇವನ ಉತ್ತರ. ಏಳು ವರ್ಷದ ದಾಂಪತ್ಯದಲ್ಲಿ ಸದಾ ಪ್ರೀತಿಯೇ ಅವನ ಆಸ್ತಿ. ಇತ್ತೀಚೆಗೆ ಮೂರು ತಿಂಗಳಿನಿಂದ ಯಾಕೋ ಮನೆ ಸಣ್ಣ ಶೀತಲ ಸಮರಕ್ಕೆ ಸಣ್ಣ ಅಡಿಪಾಯ ಹಾಕಿದಂತಾಗಿತ್ತು.

'ಯಾಕೋ ಇವತ್ತು ಬೇಡ ಅನ್ನಿಸಿದೆ' ಅಂದ ವನಮಾಲಳ ಒಂದು ಮಾತು ರಾಹುಲನಿಗೆ ಹಸಿದು ಊಟಕ್ಕೆ ಕೂತಾಗ ಮೊದಲ ತುತ್ತಿಗೇ ತಲೆಗೂದಲೊಂದು ಸಿಕ್ಕಂತಾಗಿತ್ತು.

'ಯಾಕೆ ಬೇಡ? ಏನಾಯಿತು?' ಮಾಮೂಲಾಗಿ ಕೇಳಿದ.

'ಬೇಡ ಅಷ್ಟೆ, ಕಾರಣ ಇಲ್ಲ' ಮೊಟಕು ಉತ್ತರ ಅವಳದು.

ಮನೆ ಕೆಲಸದ ಒತ್ತಡ ಇರಬಹುದು ಅಂದುಕೊಂಡು ಸುಮ್ಮನಾದ. ಇದಾಗಿ ವಾರ, ಎಂಟು ದಿನ, ಹದಿನೈದು ದಿನ ಆದರೂ ಯಾಕೋ ಬೆಡ್ ರೂಮಿನ ಬಿಕ್ಕು ತಟಸ್ಥವಾಗಲಿಲ್ಲ. ತಿಂಗಳುಗಳುರುಳಿದವು. ಅಲ್ಲಿಂದ ಅದು ಹೊರ ಹಾಲಿಗೂ ವರ್ಗವಾಗಿತ್ತು. ಮೌನದ ಮಾತುಗಳು, ಮಲಗೋ ವಿಚಾರಗಳು ಮಗಳೆದುರು ಬಂದು ನಿಂತವು. ವನಮಾಲ ಮೊದಲಿನಿಂದಲೂ ಮೌನಿಯೇ. ರಾಹುಲನ ಮದುವೆ ಆದಮೇಲೆ ಒಂದಿಷ್ಟು ಮಾತು ಕಲಿತಿದ್ದಳು. ಮಗಳಾದ ಮೇಲೆ ಅದೇಕೋ ಮೊದಲ ವನಮಾಲವಾಗಿಬಿಟ್ಟಳು. ಮಾತು ಮರೆತಂತೆ, ತನಗೆ ಮಾತೇ ಬಾರದೇನೋ ಅನ್ನುವಷ್ಟು ದಿವ್ಯಮೌನ ಧರಿಸಿ ಬಿಡುತ್ತಿದ್ದಳು.

ರಾಹುಲ ಮದುವೆಗೆ ಮುಂಚೆಯಿಂದಲೂ ಒಂಟಿ ಜೀವಿ. ಮನೆ ತುಂಬಿದ್ದರೂ ಸದಾ ಒಬ್ಬನೇ ಮೂಲೆಯೊಂದರಲ್ಲಿ ಪುಸ್ತಕ ಹಿಡಿದು ಕೂತುಬಿಡುತ್ತಿದ್ದ. ಅಮ್ಮ ಕರೆದರೆ ಊಟ. ಕರೆಯದಿದ್ದರೆ ಕೈಯ ಪುಸ್ತಕ ಮುಗಿದಾಗ ಬೇಕಿದ್ದರೆ ತಿಂದು ಇಲ್ಲವಾದರೆ ಅದೂ ಬೇಡವಾಗಿ ನಡೆದುಬಿಡುತ್ತಿದ್ದ.

ಶಾಲಾ ಕಾಲೇಜಲ್ಲೂ ಗೆಳೆಯರು ಹಾಯ್ ಹಲೋಗಷ್ಟೇ ಸೀಮಿತ. ಅಪಾರ ಓದಿನ ಹುಚ್ಚಿಗೋ ಕಾಲೇಜಲ್ಲಿ ಮುಂಗಾರಲ್ಲಿ ಮೂಡಿ ಹೋಗೋ ಮಿಂಚಂತೆ ಅವಳೊಬ್ಬಳು ರಾಹುಲನೆದುರು ಬಂದು ಹೋಗಿದ್ದಳು. ಒಲ್ಲೆನೆಂದರೂ ಮಗುವಿಗೆ ಒಳ್ಳೆಯೊಳಗೆ ಹಾಲು ಹುಯ್ಯೋ ತಾಯಂತೆ ಅವನೆದುರು ಸಣ್ಣ ಹಟವಾಗಿ ಉದ್ಭವಿಸಿದ್ದಳು. ಮಹಾ ಮೌನಿ ಮತ್ತು ಭಾರೀ ವಾಚಾಳಿಗಳ ನಡುವೆ ಅನುರಾಗ ಒಂದು ಕಡೆಯಿಂದಲಷ್ಟೇ ಏಕಮುಖಿ ಎಂಬಂತೆ ಚಲನೆ ಸಾಗಿತ್ತು. ಎಂಬತ್ತರ ದಶಕವದು. ಸೆಲ್ಲಿಲ್ಲ, ಮೆಸೇಜಿಲ್ಲ, ಫೋಟೋಗಳ ಭರಾಟೆಯಿಲ್ಲ. ಬರಿದೇ ಮೌನ ನದಿಯಲ್ಲಿ ಮಾತು ಬರದ ನಾವೆಯೇರಿ ಕಣ್ಣ ದಿಕ್ಸೂಚಿಯೊಂದಿಗೆ ಒಲವ ತೀರವರಸಿ ಸಾಗಿದ ಈರ್ವರಿಗೆ ಸಿಕ್ಕಿದ್ದು ಬರಿ ನೀರೇ ಹೊರತು ಆಚೆಗಿನ ದಡವಲ್ಲ.

ಕಾಲೇಜು ಮುಗಿಯಿತು. ಆ ಮಿಂಚು ಮರೆಯಾಯಿತು. ಕಡಿಮೆ ಮಾತಿನ ರಾಹುಲ ಮತ್ತೂ ಮೌನವಾದ. ಮತ್ತೆ ಪುಸ್ತಕಗಳ ತೆಕ್ಕೆಗೆ ಬಿದ್ದ. ಹಾಗೆ ಬಿದ್ದ ಪರಿಣಾಮವೇ ಇಂದು ಬ್ಯಾಂಕಿನ ಅಸಿಸ್ಟೆಂಟ್ ಮ್ಯಾನೇಜರ್ ಆಗಿ ಉತ್ತಮ ನೌಕರಿ ಮತ್ತು ಸ್ಥಿತಿ. ಮನೆ ಮಂದಿ